# ಸಾಂಡ್ರ ಪ್ರವಾಸ ಪ್ರೀತಿ



ಮೈಸೂರಿನ ಅರಮನೆ ಮುಂದೆ ಜರ್ಮನಿಯಿಂದ ಬಂದ ಸಾಂಡ್ರ

ವಿದೇಶಿ ಪ್ರವಾಸಿಗರನ್ನು ಭಾರತ ಬಹುವಾಗಿ ಆಕರ್ಷಿಸುತ್ತಿದೆ. ಪ್ರವಾಸೋದ್ಯಮಕ್ಕೆ ಉತ್ತೇಜನ ಸಿಕ್ಕ ಬಳಿಕವಂತೂ ದೇಶಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಗಣನೀಯ ಏರಿಕೆ ಕಂಡಿದೆ. ವರ್ಷದ 2–3 ತಿಂಗಳು ಪ್ರವಾಸಕ್ಕೆಂದೇ ಮೀಸಲಿಡುವ ವಿದೇಶಿಗರು, ಯಾವುದೇ ತಾಣಕ್ಕೆ ಭೇಟಿ ನೀಡಿದರೂ, ಅದರ ಸಂಪೂರ್ಣ ಮಾಹಿತಿ ಪಡೆಯುತ್ತಾರೆ. ಇದು ಅವರ 'ಪ್ರವಾಸ ಪ್ರೀತಿ'ಯನ್ನು ಎತ್ತಿ ತೋರುತ್ತದೆ. ಹೀಗೆ ಬಂದವರಲ್ಲಿ ಇಲ್ಲಿನ ಸಂಸ್ಕೃತಿ, ಆಚಾರ– ವಿಚಾರಗಳಿಗೆ ಮಾರು ಹೋದವರು ಅನೇಕರು. ಇಲ್ಲಿನ ಧಾರ್ಮಿಕ ನಂಬಿಕೆಗಳನ್ನು ಸ್ವತಃ ಅಳವಡಿಸಿಕೊಂಡು ಪಾಲನೆ ಮಾಡುವವರೂ ಇದ್ದಾರೆ. ಇನ್ನು ಕೆಲವರು ಇಲ್ಲಿನ ಯುವಕ ಅಥವಾ ಯುವತಿಯನ್ನು ವರಿಸಿದ್ದೂ ಉಂಟು. ಈ ಸಾಲಿಗೆ ಸೇರಿದವರು ಜರ್ಮನಿಯ ಸಾಂಡ್ರ.

ಹೌದು, ಇಲ್ಲಿನ ಕಾಶ್ಮೀರಿ ಹುಡುಗನನ್ನು ವರಿಸಿದ್ದಾರೆ ಸಾಂಡ್ರ. ಅದೂ 20 ವರ್ಷಗಳ ಹಿಂದೆ! ಸಾಂಡ್ರ ಅವರಿಗೆ ಭಾರತದ ನಂಟು 22 ವರ್ಷಗಳಷ್ಟು ಹಳೆಯದು.

ಅದು 1995ರ ಸಮಯ. ಸಾಂಡ್ರ ಪೋಷಕರೊಂದಿಗೆ ಭಾರತಕ್ಕೆ ಮೊದಲ ಬಾರಿ ಪ್ರವಾಸ ಬಂದಿದ್ದರು. ಆಗ ಆಂಧ್ರಪ್ರದೇಶದ ಪುಟ್ಟಪರ್ತಿಗೂ ಭೇಟಿ ನೀಡಿದ್ದರು. 'ಪುಟ್ಟಪರ್ತಿ ನೋಡಿ ಆಶ್ಚರ್ಯ, ವಿಸ್ಮಯಕ್ಕೊಳಗಾಗಿದ್ದೆ. ಸಾಯಿಬಾಬಾ ಅವರ ಸಾಧನೆ, ಸಾಮಾಜಿಕ ಕಳಕಳಿ, ಅವರಿಗಿರುವ ಭಕ್ತರ ಸಂಖ್ಯೆ ನನ್ನನ್ನು ನಿದ್ದೆಗೆಡಿಸಿತ್ತು. ಸಾಯಿಬಾಬಾ ಬಗ್ಗೆ ಸಣ್ಣದೊಂದು ಅಧ್ಯಯನ ನಡೆಸಿದೆ. ಆಗಿನಿಂದ ನಾನೂ ಆಶ್ರಮದ ಭಕ್ತೆಯಾದೆ' ಎಂದು ವಿವರಿಸಿದ ಸಾಂಡ್ರ ಕಾಶ್ಮೀರಿ ಯುವಕನನ್ನು ವರಿಸಿದ ಕಥೆಯನ್ನೂ ಬಿಚ್ಚಿಟ್ಟರು.

ಸಾಯಿಬಾಬಾ ಭಕ್ತೆಯಾದ ಸಾಂಡ್ರ 1996ರಲ್ಲಿ ಮತ್ತೆ ಪುಟ್ಟಪರ್ತಿಗೆ ಭೇಟಿ ನೀಡಿದರು. 'ಒಂದಷ್ಟು ದಿನ ಆಶ್ರಮದಲ್ಲಿ ತಂಗಿದ್ದು, ವಾಪಾಸಾಗುತ್ತಿದ್ದಾಗ ಆಕಸ್ಮಿಕವಾಗಿ ಕಾಶ್ಮೀರದ ಫಾರೂಕ್ ಅವರ ಪರಿಚಯವಾಯಿತು. ಭಾರತಕ್ಕೆ ಒಬ್ಬಳೇ ಬಂದಿದ್ದು ಅದೇ ಮೊದಲು. ಕೆಲ ಸಣ್ಣಪುಟ್ಟ ಸಂಕಷ್ಟಗಳು ಎದುರಾದಾಗ ಫಾರೂಕ್ ನನಗೆ ನೆರವಾದರು. ಪರಿಚಯ ಸ್ನೇಹಕ್ಕೆ ತಿರುಗಿ, ಪ್ರೀತಿಗೆ ಹೊರಳಿತು. ಭಾರತೀಯ ಸಂಸ್ಕೃತಿ ಮೇಲೆ ಹೆಚ್ಚು ಗೌರವ ಬೆಳೆಸಿಕೊಂಡ ನನಗೆ ಫಾರೂಕ್ ಅವರನ್ನು ವರಿಸಿದ್ದು ಹೆಚ್ಚು ಖುಷಿ ನೀಡಿತ್ತು. ಆಗಿನಿಂದ ಭಾರತದ ನಂಟು ನಿರಂತರವಾಗಿದೆ' ಎಂದು ನಕ್ಕರು ಸಾಂಡ್ರ.

ಫಾರೂಕ್ ಸಣ್ಣ ಉದ್ಯಮವೊಂದನ್ನು ನಡೆಸುತ್ತಿದ್ದಾರೆ. ಸಾಂಡ್ರ ಸಾಮಾಜಿಕ ಕಾರ್ಯಕರ್ತೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಬ್ಬರು ಪುತ್ರರನ್ನೊಳಗೊಂಡ ಸುಖ ಸಂಸಾರ ಅವರದ್ದು.

'ಮೈಸೂರು ಸುಂದರ ತಾಣ. ಸಾಕಷ್ಟು ಪಾರಂಪರಿಕ ಕಟ್ಟಡಗಳು ಇಲ್ಲಿವೆ. ಅರಮನೆ, ಚಾಮುಂಡಿಬೆಟ್ಟ, ಜಗನ್ಮೋಹನ ಅರಮನೆ ಇತಿಹಾಸದ ವೈಭವವನ್ನು ಸಾರುತ್ತವೆ' ಎನ್ನುವ ಅವರು, ಬೆಂಗಳೂರಿನ ವಾಹನದಟ್ಟಣೆ ಕಂಡು ಬೇಸರ ವ್ಯಕ್ತಪಡಿಸುತ್ತಾರೆ. 'ಬೆಂಗಳೂರು ವಿಶ್ವವನ್ನೇ ಆಕರ್ಷಿಸಿದ ನಗರ. 20 ವರ್ಷಗಳ ಹಿಂದೆ ಬೆಂಗಳೂರಿಗೆ ಭೇಟಿ ನೀಡಿದ್ದೆ. ಆಗ ಪ್ರಶಾಂತ ವಾತಾವರಣವಿತ್ತು. ಈಗ ಪರಿಸ್ಥಿತಿ ಬದಲಾಗಿದೆ. ದೊಡ್ಡ ದೊಡ್ಡ ಕಟ್ಟಡಗಳು ತಲೆ ಎತ್ತಿವೆ. ಜನಸಾಗರವೇ ಅಲ್ಲಿದೆ. ನಿಜಕ್ಕೂ ಬೆಂಗಳೂರು ಆಶ್ಚರ್ಯ ಉಂಟು ಮಾಡಿತು' ಎನ್ನುತ್ತಾರೆ.

ಭಾರತೀಯ ಸಂಸ್ಕೃತಿ, ಆಚಾರ– ವಿಚಾರಗಳ ಬಗ್ಗೆ ಅರಿತಿರುವ ಸಾಂಡ್ರ, ವಿಭಿನ್ನತೆಯಲ್ಲಿ ಏಕತೆ ಸಾಧಿಸಿರುವ ದೇಶ ಇದು ಎಂದು ವಿಶ್ಲೇಷಿಸುತ್ತಾರೆ. 'ದೇಶದ ಗಡಿ ಭಾಗವಾದ ಕಾಶ್ಮೀರದ್ದೇ ಒಂದು ಸಂಸ್ಕೃತಿಯಾದರೆ, ದೆಹಲಿಯದ್ದೇ ಒಂದು ಸಂಸ್ಕೃತಿ, ಕರ್ನಾಟಕದ್ದು ಮತ್ತೊಂದು ವಿಶೇಷತೆ. ಜರ್ಮನಿಯಲ್ಲಿ ಧಾರ್ಮಿಕ ನಂಬಿಕೆಗಳು ಇಷ್ಟೊಂದು ಗಾಢವಾಗಿಲ್ಲ. ಇಲ್ಲಿ ದೇವರು, ಧರ್ಮದ ತಳಹದಿ ಮೇಲೇ ದೇಶ ನಿಂತಿದೆ ಎಂದು ಅನಿಸುತ್ತದೆ. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಇದ್ದರೂ, ದೇಸಿತನ ಹಾಸುಹೊಕ್ಕಾಗಿದೆ' ಎನ್ನುವ ಸಾಂಡ್ರ, 20 ವರ್ಷಗಳಿಗೆ ಹೋಲಿಸಿದರೆ ಭಾರತ ಸಾಕಷ್ಟು ಬದಲಾವಣೆ, ಅಭಿವೃದ್ಧಿ ಹೊಂದಿದೆ' ಎನ್ನುತ್ತಾರೆ.

ಇಲ್ಲಿನ ಕುಟುಂಬ ಪದ್ಧತಿ, ಜೀವನ ಶೈಲಿ, ಆಹಾರಕ್ಕೆ ಮಾರುಹೋಗಿರುವ ಸಾಂಡ್ರ, 'ಸಂಬಂಧಗಳಿಗೆ ಇಲ್ಲಿ ಸಾಕಷ್ಟು ಬೆಲೆ ಕೊಡುತ್ತಾರೆ. ಇಲ್ಲಿನ ಅವಿಭಕ್ತ ಕುಟುಂಬ ಪದ್ಧತಿ ನನಗಿಷ್ಟ. ಇಂದು ಇಲ್ಲಿಯೂ ಕುಟುಂಬಗಳು ಒಡೆದು, ಸಣ್ಣ ಸಣ್ಣ ಕುಟುಂಬಗಳಾಗಿವೆ. ಜರ್ಮನಿಯ ಜೀವನ ಶೈಲಿಗಿಂತ ಇಲ್ಲಿನ ಶೈಲಿ ಹೆಚ್ಚು ಇಷ್ಟವಾಗುತ್ತದೆ' ಎನ್ನುತ್ತಾರೆ.

ಬಿಡುವಿನ ಸಮಯದಲ್ಲಿ ಪ್ರವಾಸಿ ತಾಣಗಳನ್ನು ಸುತ್ತುವುದೇ ದಂಪತಿಯ ಹವ್ಯಾಸ. ಪ್ರತಿ ವರ್ಷವೂ ಇಲ್ಲಿಗೆ ಭೇಟಿ ನೀಡಿ ಹೆಚ್ಚು ಹೆಚ್ಚು ಪ್ರವಾಸಿ ತಾಣಗಳನ್ನು ಕಣ್ತುಂಬಿಕೊಳ್ಳಬೇಕು ಎಂಬ ಇಂಗಿತ ವ್ಯಕ್ತಪಡಿಸುತ್ತಾರೆ ದಂಪತಿ.

■ ಸುಮಾ ಬಿ.